

ಗೃಹಸ್ಥರೂ ಮುಂದಾದರು. ಹೀಗೆ ಅಯಸ್ಕಾಂತದಿಂದ ಆಕರ್ಷಿತವಾದ ಕಬ್ಬಿಣದ ತುಣುಕುಗಳ ಹಾಗೆ ತಮ್ಮ ಬಳಿಗೆ ಬರುವ ಅಪಾರ ಸಂಖ್ಯೆಯ ಜನರನ್ನು ಸ್ವೀಕರಿಸಿಕೊಂಡ ಅಮ್ಮ ಅವರಿಗೆಲ್ಲಾ ಕರ್ಮಯೋಗದ ಮಾರ್ಗ ತೋರಿಸಿ, ಅವರನ್ನು ವಿವಿಧ ರೀತಿಯ ಲೋಕಸೇವೆಯಲ್ಲಿ ತೊಡಗಿಸಿದ್ದಾರೆ.

ಕುಟುಂಬದ ನಾಲ್ಕಾರು ಸದಸ್ಯರೂ ಸಾಮರಸ್ಯದಿಂದ ಇರುವುದು ಅಪರೂಪವಾಗುತ್ತಿರುವ ಈ ದಿನಗಳಲ್ಲಿ, ಭೂಭಾಗದ ಎಲ್ಲಾ ವರ್ಗ, ವರ್ಣ, ದೇಶ, ಭಾಷೆ, ಜನಾಂಗ, ಸಂಸ್ಕೃತಿ, ಸಂಸ್ಕಾರಗಳ ಸಾವಿರಾರು ಜನರು, 'ನಾವೆಲ್ಲಾ ಒಂದೇ ತಾಯಿಯ ಮಕ್ಕಳು!' ಎಂಬ ಭಾವದಲ್ಲಿ ಅಮೃತಪುರಿಯಲ್ಲಿ ನೆಲೆಸಿ, ಉನ್ನತವಾದ ಆಧ್ಯಾತ್ಮಿಕ ಸಾಧನೆಗಾಗಿ ಒಗ್ಗಟ್ಟಿನಿಂದ ಇರುವುದು, ಅಕ್ಷರಶಃ 'ವಸುಧೈವ ಕುಟುಂಬಕಮ್' ತತ್ತ್ವದ ಸಾಕಾರವಾಗಿದೆ.

## ಸೇವಾಯೋಜನೆಗಳ ಜನನ

ದುಃಖ ಶಮನಕಾರೀ ಅಮ್ಮನ ಬಾಹುಗಳನ್ನು ಅರಸಿ ಅನೇಕ ನೊಂದಜೀವಿಗಳು ಬಂದರು. 'ಅಮ್ಮ, ಮಳೆಗಾಲದಲ್ಲಿ ಮನೆಯ ಸೂರು ಸೋರುತ್ತದೆ. ಕಂದಮ್ಮಗಳನ್ನು ಹೇಗೆ ಕಾಪಾಡಲಿ?' ಎಂದು ಕೆಲವರು ರೋದಿಸಿದರು; ಅಮ್ಮ ಮನೆಗಳನ್ನು ಕಟ್ಟಿಕೊಡುವ 'ಅಮೃತ ಕುಟೀರ' ಯೋಜನೆಯನ್ನು ಆರಂಭಿಸಿದರು. 'ಅಮ್ಮ, ನಾನು ವಿಧವೆ, ಅಬಲೆ. ಅಂಗವಿಕಲೆ. ಮನೆಯಲ್ಲಿ ಮಕ್ಕಳಿದ್ದಾರೆ. ಪೌಷ್ಟಿಕ ಆಹಾರಕ್ಕೆ ಗತಿಯಿಲ್ಲ. ಔಷಧಿಗೆ ಹಣವಿಲ್ಲ' ಎಂದು ಕೆಲವರು ರೋದಿಸಿದಾಗ ಅಮ್ಮ 'ಅಮೃತ ನಿಧಿ' ಪಿಂಚಣಿ ವ್ಯವಸ್ಥೆ ಆರಂಭಿಸಿದರು. 'ಅಮ್ಮ, ನಾಲ್ಕಾರು ಜನರ ಕುಟುಂಬಕ್ಕೆ ನಾನೊಬ್ಬನೇ ದುಡಿಯುವ ಕೈ. ನಾನು ರೋಗದಿಂದಾಗಿ ಸತ್ತುಹೋದರೆ ಹೆಂಡತಿ ಮಕ್ಕಳ ಪಾಡೇನು? ಔಷಧೋಪಚಾರಕ್ಕೆ ಹಣವಿಲ್ಲ' ಎಂದು ಕೆಲವರು ದುಃಖಿಸಿದಾಗ ಅಮ್ಮ 'ಅಮೃತ ಕೃಪಾ' ಆಸ್ಪತ್ರೆಗಳನ್ನು ತೆರೆದರು. 'ಅಮ್ಮ, ಉತ್ತಮ ಶಿಕ್ಷಣ ನೀಡುವ ಶಾಲಾ ಕಾಲೇಜುಗಳು ಬೇಕು' ಎಂದು ಜನರು ಬೇಡಿದಾಗ ಅಮ್ಮ, 'ಜೀವನಕ್ಕಾಗಿ ಶಿಕ್ಷಣ ಹಾಗೂ ಜೀವನೋಪಾಯಕ್ಕಾಗಿ ಶಿಕ್ಷಣ' –ಇವೆರಡನ್ನೂ ನೀಡುವ 'ಅಮೃತ ಶಿಕ್ಷಣ ಸಂಸ್ಥೆ'ಗಳ ಜಾಲವನ್ನೇ ರಚಿಸಿದರು. ಅನಾಥ ಮಕ್ಕಳಿಗೆ ಅನಾಥಾಶ್ರಮವನ್ನೂ, ಕಿವುಡು ಮೂಕ ಮಕ್ಕಳಿಗೆ ವಿಶೇಷ ಶಾಲೆಗಳನ್ನೂ ತೆರೆದರು.

ಹಾಗೆ ಆರಂಭವಾದ ಮಾತಾ ಅಮೃತಾನಂದಮಯಿ ಮಠದ ಸೇವಾಯೋಜನೆಗಳು ಇಂದು ದೇಶದ ಉದ್ದಗಲ ಹರಡಿ ಬೃಹತ್ ಪ್ರಮಾಣದಲ್ಲಿ ಬೆಳೆದುನಿಂತಿವೆ: 75 ತಾಣಗಳಲ್ಲಿ ಒಟ್ಟು 45 ಸಾವಿರ

'ಮೌಲ್ಯಗಳನ್ನು ಕಡೆಗಾಣಿಸುವ ವಿದ್ಯಾಭ್ಯಾಸ, ಸಂಸ್ಕಾರವನ್ನು ಕಡೆಗಾಣಿಸುವ ನಾಗರಿಕತೆ, ಪ್ರಕೃತಿಯನ್ನು ಕಡೆಗಾಣಿಸುವ ಪ್ರಗತಿ ಮತ್ತು ಆರೋಗ್ಯವನ್ನು ಕಡೆಗಾಣಿಸುವ ಜೀವನ ಶೈಲಿ: ಈ ನಾಲ್ಕು ಕಾರಣಗಳಿಂದಾಗಿ ಸಮಾಜದಲ್ಲಿ ಸಮಸ್ಯೆಗಳು ಉಂಟಾಗಿವೆ.'

I want to share with you what I have learned from Amritapuri: Giving. That is the message I get from Amritapuri. Go on giving. You can give. It's not only money. You can share knowledge. You can remove the pain. And you can even go to the person who is suffering. Every one of us- the rich and poor- can give. There is no greater message than Amma's giving to all the people of this region, and Kerala, and India, and to the world.

**-Dr. A.P.J. Abdul Kalam,**
The then President of India

